O.S.No.:122/2016
D.W.:1

ಈ ದಿನ ದಿಃ07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ ಎಸಿಸಿ ರವರಿಂದಃ-**

14. ನನ್ನ ತಾತ ದ್ಯಾವೇಗೌಡ ರವರಿಗೆ ಇಬ್ಬರು ಹೆಂಡತಿಯರು. ದ್ಯಾವೇಗೌಡ ರವರ ಮೊದಲನೇ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ, ಆದರೆ ಅವರ ಎರಡನೇ ಹೆಂಡತಿಯ ಹೆಸರು ದೇವಮ್ಮ ಆಗಿರುತ್ತದೆ. ಅವರ ಮೊದಲನೇ ಹೆಂಡತಿಗೆ ಇಬ್ಬರು ಮಕ್ಕಳು, ಅವರುಗಳೆಂದರೆ ಮೋಟಪ್ಪ ಮತ್ತು ದುಂಡಯ್ಯ ಆಗಿರುತ್ತಾರೆ. ಮೋಟಪ್ಪ ರವರಿಗೆ ಇಬ್ಬರು ಮಕ್ಕಳಿದ್ದು, ಅವರುಗಳೆಂದರೆ ಚಿಕ್ಕಮರಿ ಮತ್ತು ಶಿವಣ್ಣ ಆಗಿರುತ್ತಾರೆ. ದ್ಯಾವೇಗೌಡ ರವರ ಎರಡನೇ ಹೆಂಡತಿಗೆ ಮೂರು ಜನ ಮಕ್ಕಳಿದ್ದು, ಅವರುಗಳೆಂದರೆ ಮಾದ, ಕೆಂಚಪ್ಪ ಮತ್ತು ದುಂಡಪ್ಪ ಆಗಿರುತ್ತಾರೆ. ದ್ಯಾವೇಗೌಡ ರವರ ಇಬ್ಬರ ಹೆಂಡತಿ ಮತ್ತು ಮಕ್ಕಳುಗಳು ಅವರ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

15. ಸರ್ವೆ ನಂ.130ರ ಐ.ಎಲ್ ಮತ್ತು ಆರ್.ಆರ್ ಖಾತೆಯು ಭೈರಾ ಎನ್ನುವವರ ಹೆಸರಿನಲ್ಲಿತ್ತು. ಸರ್ವೆ ನಂ.131ರ ಐ.ಎಲ್ ಮತ್ತು ಆರ್.ಆರ್ ಖಾತೆಯು ಜೋಗಿ ಎನ್ನುವವರ ಹೆಸರಿನಲ್ಲಿತ್ತು. ನಿಡಿ-1ರ ಪ್ರಕಾರ ಸರ್ವೆ

ನಂ.18ರಲ್ಲಿ 2ಎಕರೆ ಜಮೀನನ್ನು ಕೆಂಚಪ್ಪ ಉ: ಚಿಕ್ಕೇಗೌಡ ಮತ್ತು ದುಂಡಪ್ಪ ರವರು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ನಿಡಿ-1ರಲ್ಲಿ ನಮೂದಿಸಿದ ಷೆಡ್ಯೂಲ್ ಆಸ್ತಿಯ ಉತ್ತರ ದಿಕ್ಕಿಗೆ ಜೋಗಿ ಮಗ ಭೈರಯ್ಯ ರವರಿಂದ ಕ್ರಯಕ್ಕೆ ಪಡೆದಿರುವ ಜಮೀನು ಬರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿ. ಸರ್ವೆ ನಂ.131ರಲ್ಲಿ ಜೋಗಿ ರವರ ಹೆಸರಿಗೆ ಇದೆ ಎಂದು ಈ ಹಿಂದೆ ನಾನು ಹೇಳಿದ ಜಮೀನೇ ನಿಡಿ-1ರ ಷೆಡ್ಯೂಲ್ ನ ಉತ್ತರಕ್ಕೆ ನಮೂದಿಸಿದ ಜಮೀನು ಎಂದರೆ ಸರಿಯಲ್ಲ.

16. ಜೋಗಿ ಮಗ ಭೈರಾ ರವರು ಲಿಂಗಯ್ಯನ ಮಗ ಬೋರಯ್ಯ ರವರಿಗೆ ಕ್ರಯಕ್ಕೆ ಕೊಟ್ಟಿದ್ದ ಜಮೀನಿನ್ನೇ ವಾದಿಯ ತಂದೆಯವರು ಖರೀದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಸರ್ವೆ ನಂ.130ರ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ವಾದಿಯ ತಂದೆಯವರು ಲಿಂಗಯ್ಯ ರವರ ಮಗ ಬೋರಯ್ಯ ರವರಿಂದ ಖರೀದಿ ಮಾಡಿದ ಜಮೀನು ಸರ್ವೆ ನಂ.131ರ ಜಮೀನು ಎಂಬ ವಿಚಾರ ನನಗೆ ಗೊತ್ತಿದ್ದರು, ಸರ್ವೆ ನಂ.130ನ್ನು ಖರೀದಿಸಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ದಿನಾಂಕ.07.06.1956ರಲ್ಲಿ ದಾವಾಸ್ವತ್ತನ್ನು ಸಿದ್ದಯ್ಯ ಎನ್ನುವವರಿಗೆ ಅಡಮಾನ ಮಾಡಿದ್ದರು ಎಂದರೆ ಸರಿ. ಆ ಅಡಮಾನ ಪತ್ರದ ದಕ್ಷಿಣಕ್ಕೆ ನಮೂದು

ಮಾಡಿರುವ ಜಮೀನಿನಲ್ಲಿ ಈಗ ನನ್ನ ದೊಡ್ಡಪ್ಪನ ಮಗನಾದ ಶಿವಣ್ಣ ಮತ್ತು ಚಿಕ್ಕಮರಿ ರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಕ್ರಯಪತ್ರ ಮತ್ತು ಅಡಮಾನ ಪತ್ರದ ಪ್ರಕಾರ ದಕ್ಷಿಣಕ್ಕೆ ಜೋಗಿಯ ಜಮೀನು ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಕ್ರಯಪತ್ರದ ಪ್ರಕಾರ ಜೋಗಿಯ ಜಮೀನು ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿ.

18. 1947ರ ಪತ್ರದ ಪ್ರಕಾರ ನಿಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಸಿಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಅವಿದ್ಯಾವಂತರು ಹಾಗಾಗಿ ನಾವು ಮಾಡಿಸಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ನಾನು ವಿದ್ಯಾವಂತ, ಸರ್ಕಾರಿ ಉದ್ಯೋಗದಲ್ಲಿದ್ದೆ ಎಂದರೆ ಸರಿ. ನಮ್ಮ ತಂದೆಯವರು 2011ರಲ್ಲಿ ಮರಣ ಹೊಂದಿರುತ್ತಾರೆ. ನಿಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ವಾದಿ ಅಥವಾ ಆತನ ತಂದೆಯ ವಿರುದ್ಧ ಯಾವುದಾದರೂ ಕೇಸನ್ನು ಹಾಕಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು, 2009ರಲ್ಲಿ ಹಾಕಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಆತನ ಸಹೋದರರು ಖರೀದಿಸಿದಂತಹ ಜಮೀನು ನಂತರದಲ್ಲಿ ಮೋಟಪ್ಪ ರವರ ಹಿಸ್ಸೆಗೆ ಹೋಗಿದ್ದ ಕಾರಣಕ್ಕೆ ನಮ್ಮ ತಂದೆಯವರು ವಾದಿ ಮತ್ತು ಆತನ ತಂದೆಯ ವಿರುದ್ಧ ಯಾವುದೇ ಕೇಸನ್ನು ಹೂಡಿರಲಿಲ್ಲ ಎಂದರೆ ಸರಿಯಲ್ಲ.

19. ದಾವಾಸ್ವತ್ತಿನ ದಕ್ಷಿಣದ ದಿಕ್ಕಿಗೆ ಇರುವ ಜಮೀನಿನಲ್ಲಿ ಮೋಟಪ್ಪನ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂಬ ಸಂಗತಿ ನನಗೆ ಗೊತ್ತಿದ್ದರು, ದಾವಾಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2009-2010ರಲ್ಲಿ ನೀವು ಸಲ್ಲಿಸಿದ ಅಪೀಲು ಏನಾಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು  ನಮ್ಮಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪೀಲಿನಲ್ಲಿ ಆದೇಶವು ನಿಮ್ಮ ಪರವಾಗಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ವಾದಿಯ ತಂದೆಯ  ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದ ಪಹಣಿಯನ್ನು ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ಸದ್ಯಕ್ಕೆ ದಾವಾಸ್ವತ್ತಿನ ಪಹಣಿ ಪತ್ರಿಕೆಯು ವಾದಿಯ ತಂದೆಯ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ.

20. ದಾವಾಸ್ವತ್ತಿನಲ್ಲಿ ವಾದಿಗಳೆ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಇರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.18 ರ ಜಮೀನು ದುರಸ್ತಿಯಾಗಿ ಸರ್ವೆ ನಂ.131 ಆಗಿರುತ್ತದೆ ಎಂದರೆ ಸರಿ. ದಿನಾಂಕ.25.04.1949ರಲ್ಲಿ ವಾದಿಗಳ ತಂದೆಯು ದಾವಾಸ್ವತ್ತನ್ನು  ನಿಂಗಯ್ಯನ ಮಗ ಬೋರಯ್ಯ ರವರಿಂದ ನೋಂದಾಯಿತ ಖರೀದಿ ಪತ್ರದಡಿಯಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯು ಸಹ ವಾದಿಗಳ

ತಂದೆಯ ಹೆಸರಿಗೆ ಬಂದಿತ್ತು ಎಂದರೆ ಸರಿಯಲ್ಲ. ದಿನಾಂಕ.07.06.1956ರಲ್ಲಿ ವಾದಿಗಳ ತಂದೆಯು ದಾವಾಸ್ವತ್ತನ್ನು ಸಿದ್ದಯ್ಯ ಬಿನ್ ಮರಿಯಪ್ಪ ರವರಿಗೆ ಅಡಮಾನಪತ್ರದಡಿಯಲ್ಲಿ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ಸರ್ವೆ ನಂ.130ರ ಜಮೀನಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಭೋಗ್ಯ ಬಿಡುಗಡೆ ಆಗುವಷ್ಟರಲ್ಲಿಯೇ ಸಿದ್ದಯ್ಯ ರವರು ಹಾಗೂ ವಾದಿಗಳ ತಂದೆಯವರು ಮರಣ ಹೊಂದಿದ್ದರು ಎಂದರೆ ಸರಿ. ಭೋಗ್ಯ ಪತ್ರದ ಆಧಾರದ ಮೇಲೆಯೇ ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆ ಪಹಣಿಗಳು 1970 ರಿಂದ 2007ರ ವರೆಗೂ ಸಿದ್ದಯ್ಯ ರವರ ಹೆಸರಿನಲ್ಲಿಯೇ ಬರುತ್ತಿದ್ದವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು ಎಂದು ನುಡಿಯುತ್ತಾರೆ.

21. ದಾವಾಸ್ವತ್ತಿಗೆ ಸಂಬಂಧಿಸಿದಂತೆ 1970 ರಿಂದ 2007ರ ವರೆಗಿನ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಅದರ ಪ್ರಕಾರ ದಾವಾಸ್ವತ್ತಿನ ಪಹಣಿ ಪತ್ರಿಕೆ 1970 ರಿಂದ 2007ರ ವರೆಗೆ ಯಾರ ಹೆಸರಿನಲ್ಲಿ ಬರುತ್ತಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಜೋಗಿ ರವರ ಹೆಸರಿನಲ್ಲಿ ಬರುತ್ತಿತ್ತು ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಪಹಣಿ ಪತ್ರಿಕೆಗಳು 1970 ರಿಂದ 2007ರವರೆಗೆ ಜೋಗಿ ರವರ ಹೆಸರಿನಲ್ಲಿ ಯಾವತ್ತು ಬಂದೆ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ.19.06.2007ರಂದು ಸಿದ್ದಯ್ಯ ರವರ ಮಕ್ಕಳಾದ ಕೆ.ಎಸ್ ನಂದ

ಕುಮಾರ್ ಮತ್ತು ಕೆ.ಎಸ್ ಕೃಷ್ಣಮೂರ್ತಿ ರವರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಭೋಗ್ಯಬಿಡುಗಡೆ ಪತ್ರವನ್ನು ವಾದಿಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭೋಗ್ಯಬಿಡುಗಡೆಯಾದ ನಂತರ ದಾವಾಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳು ವಾದಿಗಳ ಹೆಸರಿಗೆ ಬಂದಿತ್ತು ಮತ್ತು ಅದರ ವಿರುದ್ದವೇ ನಾವು ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

22. 1970 ರಿಂದ 2009 ರ ವರೆಗೂ ನಾವು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಇರುವಂತಹ ಯಾವುದೇ ಖಾತೆ ಪಹಣಿಗಳನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅವಿಧ್ಯಾವಂತರು ಹಾಗಾಗಿ ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಕೆಲಸದಿಂದ ನಿವೃತ್ತಿ ಹೊಂದಿದ ನಂತರ ದಾವಾಸ್ವತ್ತನ್ನು ಅವಿಧ್ಯಾವಂತರಾದ ವಾದಿಗಳಿಂದ ಹೇಗಾದರೂ ಮಾಡಿ ಹೊಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಅವರ ಹೆಸರಿಗೆ ಇದ್ದ ಪಹಣಿ ಖಾತೆಯ ವಿರುದ್ದ ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಪ್ರಕಾರದ ಹಕ್ಕು ಅಧಿಕಾರ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಖರೀದಿಯ ದಿನದಿಂದಲ್ಲೂ ವಾದಿಗಳ ತಂದೆಯೇ ಸ್ವಾಧೀನಾನುಭವದಲ್ಲಿ ಇದ್ದರು, ಅಡಮಾನದ ನಂತರ ಸಿದ್ದಯ್ಯ ರವರು ಸ್ವಾಧೀನಾನುಭವದಲ್ಲಿದ್ದರು, ಅಡಮಾನ ಬಿಡುಗಡೆಯ ನಂತರ ವಾದಿಗಳೆ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

23. ದಾವಾಸ್ವತ್ತಿನಿಂದ ವಾದಿಗಳನ್ನು ಹೊರಹಾಕುವ ದುರುದ್ದೇಶದಿಂದ ನಾನು ಪೊಲೀಸರು ಮತ್ತು ಗುಂಡಾಗಳ ಸಹಾಯವನ್ನು ಪಡೆದುಕೊಂಡು ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಗಳ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಜಕೀಯವಾಗಿ ಪ್ರಬಲನಾಗಿದ್ದು, ದುರ್ಬಲರಾದ ವಾದಿಗಳನ್ನು ಹೆದರಿಸಿ ಅವರಿಂದ ದಾವಾಸ್ವತ್ತಿನ್ನು ಹೇಗಾದರೂ ಮಾಡಿ ಕಬಳಿಸಬೇಕೆಂಬ ದುರುದ್ದೇಶದಿಂದ ಅವರಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ದಕ್ಷಿಣಕ್ಕೆ ಬರುವ ಜಮೀನನ್ನು ಕೇಳುವ ಬದಲು ದಾವಾಸ್ವತ್ತನ್ನು ನಾನು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ದಾವಾಸ್ವತ್ತನ್ನು ಖರೀದಿಸಿದ್ದರೆ ಅದಕ್ಕೆ ಸಂಬಂಧಿಸಿದಂತೆ ಖಾತೆ ಪಹಣಿಯನ್ನು ಸಹ ಮಾಡಿಸಿಕೊಳ್ಳುತ್ತಿದ್ದೆ, ಆದರೆ ಖರೀದಿಸದೆ ಇರುವ ಕಾರಣಕ್ಕೆ ಇದುವರೆಗೂ ಖಾತೆ ಪಹಣಿಯನ್ನು ನಾನು ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

24. ದಾವಾಸ್ವತ್ತಿನಲ್ಲಿ ನಮೂದಿಸಿದ ಚಕ್ಕುಬಂದಿಯೇ ಬೇರೆ, ನಿಡಿ-1ರಲ್ಲಿ ನಮೂದಿಸಿದ ಚಕ್ಕುಬಂದಿಯೇ ಬೇರೆ ಎಂದರೆ ಸರಿ. ನಿಡಿ-4ರ ಪ್ರಕಾರ ವಾದಿಗಳು ಸಲ್ಲಿಸಿದ ಅಪೀಲು ಅರ್ಜಿಯು ಸಿವಿಲ್ ನ್ಯಾಯಾಲಯದಲ್ಲಿ ಇತ್ಯಾರ್ಥ ಮಾಡಿಕೊಳ್ಳಿ ಎಂಬ ಕಾರಣಕ್ಕೆ ಮುಕ್ತಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-5ರ ಪ್ರಕಾರ ಸರ್ವೆ ನಂ.130ರ ಜಮೀನು ಹುಚ್ಚಿ ಕೋಂ ಭೈರಾ ರವರ

ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ.131ರ ಖರ್ದಾ ದಾಖಲೆಯು ಕೆಂಪಿ ಕೋಂ ಜೋಗಿ ರವರ ಹೆಸರಿಗೆ ಇರುತ್ತದೆ. ಸರ್ವೆ ನಂ.131ರ ಜಮೀನು ಕೆಂಪಿ ರವರ ಹೆಸರಿಗೆ ಬರುವುದಕ್ಕೂ ಮೊದಲು ಜೋಗಿ ರವರ ಹೆಸರಿಗೆ ಇತ್ತು ಎಂದರೆ ಸರಿ.

25. ನಿಡಿ-8ರಲ್ಲಿ ನಮೂದಿಸಿದ ಚಕ್ಕುಬಂದಿಯು ನಿಡಿ-1ರಲ್ಲಿ ನಮೂದಿಸಿದ ಚಕ್ಕುಬಂದಿಗೆ ಪೂರಕವಾಗಿಲ್ಲ ಎಂದರೆ ಸರಿಯಲ್ಲ. ನಿಡಿ-9 ರಿಂದ ನಿಡಿ-12ಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-14ರಲ್ಲಿ ನಾನು ಪಕ್ಷಕಾರನಲ್ಲ ಎಂದರೆ ಸರಿ. ನಿಡಿ-15ನ್ನು ಅವರ ಆಸ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂ.131ಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅದನ್ನೇ ಒಎಸ್ ನಂ.865ರಲ್ಲಿ ತಡೆ ಹಿಡಿದಿರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ವಾದಿಗಳೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನಾವುಗಳು ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾವು ಸರ್ವೆ ನಂ.131ರಲ್ಲಿ ಯಾವುದೇ ಜಮೀನು ಖರೀದಿಸಿಲ್ಲ, ನಾವು ಖರೀದಿಸಿರುವುದು ಸರ್ವೆ ನಂ.18ರಲ್ಲಿ ಎಂದರೆ ಸರಿಯಲ್ಲ. ಸರ್ವೆ ನಂ.18ರಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲದೆ ಇರುವ ಕಾರಣಕ್ಕೆ ವಾದಿಗಳಿಗೆ ಸೇರಿದ ದಾವಾಸ್ವತ್ತಿಗೆ ನಾವು ವಿನಾಃ ಕಾರಣ

ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ತಂದೆಯ ಹೆಸರಿಗಾಗಲೀ ಅಥವಾ ನಮ್ಮ ಹೆಸರಿಗಾಗಲೀ ಇರುವಂತಹ ಯಾವುದೇ ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**